# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1085 (1163) |
| ಸದಸ್ಯರ ಹೆಸರು | : | ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13/03/2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮೊದಲು ಯಾವಾಗ ವಸತಿ ಶಾಲೆಗಳನ್ನು ಪ್ರಾರಂಭಿಸಲಾಯಿತು; ಪ್ರಸ್ತುತ ರಾಜ್ಯದಲ್ಲಿ ಯಾವ ಯಾವ ವಸತಿ ಶಾಲೆಗಳು ಇರುತ್ತವೆ; ರಾಜ್ಯದಲ್ಲಿ ಇರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಒಟ್ಟು ವಸತಿ ಶಾಲೆಗಳು ಎಷ್ಟು; ಇವುಗಳಲ್ಲಿ ಇರುವ ಮಕ್ಕಳ ದಾಖಲಾತಿ ಎಷ್ಟು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಸ್ಥಾಪನೆಯಾಗುವ ಪೂರ್ವದಲ್ಲಿ, 1983 ರಿಂದ ವಸತಿ ಶಾಲೆಗಳು ಪ್ರಾರಂಭವಾಗಿ 47 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮತ್ತು 4 ನವೋದಯ ಮಾದರಿಯ ವಸತಿ ಶಾಲೆಗಳು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.<br><br>ಸರ್ಕಾರದ ಆದೇಶ ಸಂಖ್ಯೆ:ಸಕಇ 532 ಪಕವಿ 96 ದಿನಾಂಕ: 06.10.1999 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಪ್ರಾರಂಭಿಸಲು ಆದೇಶಿಸಿದೆ. ಅದರಂತೆ, ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ನೋಂದಣಿ ಕಾಯಿದೆ 1960 ರ ಅಡಿಯಲ್ಲಿ ದಿ.22.11.1999 ರಂದು ನೊಂದಣಿಯಾಗಿ ದಿನಾಂಕ:02.02.2000 ರಂದು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ 84 ವಸತಿ ಶಾಲೆಗಳೊಂದಿಗೆ ಕಾರ್ಯಾರಂಭ ಮಾಡಿದೆ.<br><br>ಪ್ರಸ್ತುತ ರಾಜ್ಯದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 (ಪರಿಶಿಷ್ಟ ಜಾತಿ -539, ಪರಿಶಿಷ್ಟ ವರ್ಗ-156 ಹಾಗೂ ಹಿಂದುಳಿದ ವರ್ಗ-179) ವಸತಿ ಮೊರಾರ್ಜಿ ದೇಸಾಯಿ/ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯಿ, ಡಾ:ಬಿ.ಆರ್. ಅಂಬೇಡ್ಕರ್/ಡಿ. ದೇವರಾಜ್ ಅರಸು/ಇಂದಿರಾಗಾಂಧಿ/ಮಹಾತ್ಮಾ ಜ್ಯೋತಿ ಬಾ ಫುಲೆ/ಮಾಸ್ತಿ ವೆಂಕಟೇಶ್ ಅಯ್ಯಂಗಾರ್/ನಾರಾಯಣ ಗುರು/ರಮಬಾಯಿ ಅಂಬೇಡ್ಕರ್/ಸಾವಿತ್ರಿ ಬಾ ಫುಲೆ/ಸಂತಸೇವಲಾಲ್ ವಸತಿ ಶಾಲೆಗಳು ಮಂಜೂರಾಗಿ ಕಾರ್ಯನಿರ್ವಹಿಸುತ್ತಿವೆ<br><br>ಸಂಘದ ಅಧೀನದಲ್ಲಿ ವಸತಿ ಶಾಲೆ/ಕಾಲೇಜುಗಳಲ್ಲಿ 2025-26ನೇ ಸಾಲಿನ ವಿದ್ಯಾರ್ಥಿಗಳ ಮಂಜೂರಾತಿ ಮತ್ತು ದಾಖಲಾತಿ ವಿವರ ಹಾಗೂ ವಸತಿ ಶಾಲೆಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |

| | | |
|---|---|---|
| ಆ) | ರಾಜ್ಯದಲ್ಲಿ ಬೇಡಿಕೆಗೆ ಅನುಗುಣವಾಗಿ ವಸತಿ ಶಾಲೆಗಳು ಇರುತ್ತದೆಯೇ; ಇಲ್ಲದೆ ಇದ್ದಲ್ಲಿ ವಸತಿಗಳ ಶಾಲೆಗಳ ನಿರ್ಮಾಣಕ್ಕೆ ಸರ್ಕಾರ ಹಾಕಿಕೊಂಡಿರುವ ಯೋಜನೆ ಏನು; ವಸತಿ ಶಾಲೆಗಳಲ್ಲಿ ನಿರ್ಮಾಣಕ್ಕೆ ಸರ್ಕಾರ ಪ್ರಸ್ತುತ ವರ್ಷ ಹಂಚಿಕೆ ಮಾಡಿರುವ ಅನುದಾನವೆಷ್ಟು ಮತ್ತು ವೆಚ್ಚವಾಗಿರುವ ಅನುದಾನವೆಷ್ಟು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರವು ಒಂದು ಹೋಬಳಿಗೆ ಒಂದು ವಸತಿ ಶಾಲೆ ಮಂಜೂರು ಮಾಡಲು ಕ್ರಮವಹಿಸಿದ್ದು, ಪ್ರಸ್ತುತ ರಾಜ್ಯದಲ್ಲಿ ಒಟ್ಟು 779 ಹೋಬಳಿಗಳಿದ್ದು, ಅದರಲ್ಲಿ 636 ಹೋಬಳಿಗಳಲ್ಲಿ 874 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಉಳಿದ, 143 ಹೋಬಳಿಗಳ ಪೈಕಿ 66 ಬೆಂಗಳೂರು ನಗರದ ಹಾಗೂ ಕಸಬಾ ಹೋಬಳಿಗಳನ್ನು ಹೊರತುಪಡಿಸಿ, ವಸತಿ ಶಾಲೆಗಳಿಲ್ಲದ ಗ್ರಾಮೀಣ ಹೋಬಳಿಗಳು, 54 ವಸತಿ ಶಾಲೆಗಳಿಲ್ಲದ ಕಸಬಾ (ಬೆಂಗಳೂರು ನಗರ ಹೊರತುಪಡಿಸಿ) ಹೋಬಳಿಗಳು ಸೇರಿದಂತೆ 120 ಹೋಬಳಿಗೆ ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡಲು 2026-27ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br><br>2025-26 ನೇ ಸಾಲಿನ ಆಯವ್ಯಯದನ್ವಯ 61 ವಸತಿ ಶಾಲೆಗಳಿಗೆ ವಸತಿ ಶಾಲಾ ಸಂಕೀರ್ಣ ಕಾಮಗಾರಿಗಳನ್ನು ರೂ.1292.50 ಕೋಟಿಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಸರ್ಕಾರದ ಆದೇಶ ಸಂಖ್ಯೆ:ಸಕಇ 44 ಎಂಡಿಎಸ್ 2025, ಬೆಂಗಳೂರು ದಿನಾಂಕ:10.03.2025 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಕ್ರಮವಹಿಸಲಾಗಿರುತ್ತದೆ. |
| ಇ) | ರಾಜ್ಯದಲ್ಲಿ ಇರುವ ಹೆಣ್ಣು ಮಕ್ಕಳ ವಸತಿ ಶಾಲೆಗಳು ಎಷ್ಟು; ಹೆಣ್ಣು ಮಕ್ಕಳ ವಸತಿ ಶಾಲೆಗಳಲ್ಲಿ ದಾಖಲಾಗಿರುವ ಸಂಖ್ಯೆ ಎಷ್ಟು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 209 ಕಿತ್ತೂರು ರಾಣಿ ಚೆನ್ನಮ್ಮ, ಮೊರಾರ್ಜಿ ದೇಸಾಯಿ, ಡಾ\|\|ಬಿ.ಆರ್ ಅಂಬೇಡ್ಕರ್ ಹಾಗೂ ಪ್ರತಿಭಾನ್ವಿತ ಹೆಣ್ಣು ಮಕ್ಕಳ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ 209 ವಸತಿ ಶಾಲೆಗಳಲ್ಲಿ 49,463 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ.<br><br>8 ಬಾಲಕರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 657 ಮೊರಾರ್ಜಿ ದೇಸಾಯಿ, ಅಟಲ್ ಬಿಹಾರಿ, ಡಾ\|\|ಬಿ.ಆರ್ ಅಂಬೇಡ್ಕರ್, ಶ್ರೀಮತಿ ಇಂದಿರಾಗಾಂಧಿ, ನಾರಾಯಣ ಗುರು ವಸತಿ ಶಾಲೆಗಳು ಸಹ ಶಿಕ್ಷಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸಹ ಶಿಕ್ಷಣ ವಸತಿ ಶಾಲೆ/ಕಾಲೇಜುಗಳಲ್ಲಿ 68,794 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. |
| ಈ) | ಪ್ರತಿ ಹೋಬಳಿಗೆ ಒಂದರಂತೆ ವಸತಿ ಶಾಲೆಗಳನ್ನು ತೆರೆಯುವ ಉದ್ದೇಶ ರಾಜ್ಯ ಸರ್ಕಾರಕ್ಕೆ ಇರುತ್ತದೆಯೇ; ಇದ್ದಲ್ಲಿ, ಅದನ್ನು ಜಾರಿಗೊಳಿಸಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, 779 ಹೋಬಳಿಗಳ ಪೈಕಿ 636 ಹೋಬಳಿಗಳಲ್ಲಿ ಈಗಾಗಲೇ ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ 143 ಹೋಬಳಿಗಳ ಪೈಕಿ ಇತ್ತೀಚೆಗೆ ತಾಲ್ಲೂಕುಗಳಾಗಿ ಘೋಷಣೆಯಾಗಿ ವಸತಿ ಶಾಲೆಗಳಿಲ್ಲದ 66 ಗ್ರಾಮೀಣ ಹೋಬಳಿಗಳು(ಬೆಂಗಳೂರು ನಗರದ ಹಾಗೂ ಕಸಬಾ ಹೋಬಳಿಗಳನ್ನು ಹೊರತುಪಡಿಸಿ), ಹಾಗೂ ವಸತಿ ಶಾಲೆಗಳಿಲ್ಲದ 54 ಕಸಬಾ(ಬೆಂಗಳೂರು ನಗರ ಹೊರತುಪಡಿಸಿ) ಹೋಬಳಿಗಳು ಸೇರಿದಂತೆ 120 ಹೋಬಳಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡಲು 2026-27ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿರುತ್ತದೆ. |

| | | |
|---|---|---|
| ಊ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ (ಕ್ರೈಸ್) ಇರುವ ಒಟ್ಟು ಸರ್ಕಾರಿ ನೌಕರರು ಎಷ್ಟು; ಇವುಗಳಲ್ಲಿ ಖಾಯಂ ಸಿಬ್ಬಂದಿ ಹಾಗೂ ನಿಯೋಜನೆಯ ಮೇಲೆ ಕೆಲಸ ಮಾಡುತ್ತಿರುವ ನೌಕರರು ಎಷ್ಟು ಮತ್ತು ಖಾಲಿ ಇರುವ ಹುದ್ದೆಗಳು ಎಷ್ಟು; ಖಾಯಂ ನೌಕರರನ್ನು ತುಂಬಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿರುತ್ತದೆ.? | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ 84 ಅಧಿಕಾರಿ/ ಸಿಬ್ಬಂದಿಗಳ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 53 ಹುದ್ದೆಗಳಿಗೆ ಇತರೆ ಇಲಾಖೆಗಳಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸಲು ಅವಕಾಶವಿದ್ದು, ಪ್ರಸ್ತುತ 38 ಅಧಿಕಾರಿ/ ಸಿಬ್ಬಂದಿಗಳು ಇತರೆ ಇಲಾಖೆಗಳಿಂದ ನಿಯೋಜನೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ. ದ್ವಿತೀಯ ದರ್ಜೆಯ ಸಹಾಯಕರು 7 ಹುದ್ದೆಗಳ ಪೈಕಿ 04 ಖಾಯಂ ದ್ವಿತೀಯ ದರ್ಜೆ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದು, ಬಾಕಿ ಉಳಿದ ಹುದ್ದೆಗಳಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಸಂಘದ ಅಧೀನದ 874 ವಸತಿ ಶಾಲೆ/ ಕಾಲೇಜುಗಳಿಗೆ ಮಂಜೂರಾಗಿರುವ ಬೋಧಕ, ಬೋಧಕೇತರ ಮತ್ತು ಗ್ರೂಪ್- ಡಿ ವೃಂದದ ಹುದ್ದೆಗಳ ವಿವರ ಈ ಕೆಳಕಂಡಂತಿದೆ.<br><br>ವೃಂದ / ಮಂಜೂರಾತಿ / ಭರ್ತಿ / ಖಾಲಿ:<br>ಬೋಧಕ ಹುದ್ದೆಗಳು: 9261 / 5456 / 3805<br>ಬೋಧಕೇತರ ಹುದ್ದೆಗಳು: 2386 / 1120 / 1266<br>ಗ್ರೂಪ್-ಡಿ: 8213 / 8140 / 73<br>**ಒಟ್ಟು**: 19860 / 14716 / 5144<br><br>ವಸತಿ ಶಾಲೆಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆಗಳಿಗೆ ಎದುರಾಗಿ ಅತಿಥಿ/ ಹೊರಸಂಪನ್ಮೂಲದ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ. ಗ್ರೂಪ್ 'ಡಿ' ವೃಂದದ ಹುದ್ದೆಗಳನ್ನು ಆರ್ಥಿಕ ಇಲಾಖೆಯ ನಿರ್ದೇಶನದಂತೆ ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ.<br><br>ಉಳಿಕೆ ಮೂಲ ವೃಂದದಲ್ಲಿ ಒಟ್ಟು 2756 ಹುದ್ದೆಗಳು ಖಾಲಿ ಇದ್ದು, ಅದರಲ್ಲಿ 875 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ಮೂಲ ವೃಂದದ 875 ಮತ್ತು ಕಲ್ಯಾಣ ಕರ್ನಾಟಕ ವೃಂದದ 780 ಬೋಧಕ/ಬೋಧಕೇತರ ಹುದ್ದೆಗಳು ಸೇರಿದಂತೆ ಒಟ್ಟು 1655 ಹುದ್ದೆಗಳನ್ನು ನೇರನೇಮಕಾತಿ ಮುಖಾಂತರ ಭರ್ತಿ ಮಾಡಲು ನಿಯಮಾನುಸಾರ ಕ್ರಮವಹಿಸುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |

**SWD/92/MDS/2026**

**(ಡಾ: ಹೆಚ್.ಸಿ ಮಹದೇವಪ್ಪ)**

ಸಮಾಜ ಕಲ್ಯಾಣ ಸಚಿವರು.

**ಶ್ರೀ ರಮೇಶ್ ಬಾಬು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1085ಗೆ ಅನುಬಂಧ**

| ಕ್ರ. ಸಂ. | ವಸತಿ ಶಾಲೆಗಳ ವಿವರಗಳು | ಪ. ಜಾತಿ | ಪ. ವರ್ಗ | ಹಿಂ. ವರ್ಗ | ಒಟ್ಟು |
|---|---|---|---|---|---|
| 1 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಸಹ ಶಿಕ್ಷಣ) | 10 | 1 | 5 | 16 |
| 2 | ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳು (ಸಹ ಶಿಕ್ಷಣ) | 98 | 25 | 0 | 123 |
| 3 | ಡಾ. ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಗಳು | 31 | 11 | 0 | 42 |
| 4 | ಡಿ. ದೇವರಾಜ್ ಅರಸು ವಸತಿ ಶಾಲೆಗಳು (ಸಹ ಶಿಕ್ಷಣ) | 0 | 0 | 4 | 4 |
| 5 | ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆಗಳು (ಸಹ ಶಿಕ್ಷಣ) | 64 | 26 | 8 | 98 |
| 6 | ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಗಳು | 110 | 46 | 2 | 158 |
| 7 | ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳು (ಸಹ ಶಿಕ್ಷಣ) | 12 | 2 | 13 | 27 |
| 8 | ಮಹಾತ್ಮ ಜ್ಯೋತಿ ಬಾ ಫುಲೆ ವಸತಿ ಶಾಲೆ (ಸಹ ಶಿಕ್ಷಣ) | 2 | 0 | 0 | 2 |
| 9 | ಮಾಸ್ತಿ ವೆಂಕಟೇಶ ಐಯ್ಯಂಗಾರ್ ವಸತಿ ಶಾಲೆ (ಸಹ ಶಿಕ್ಷಣ) | 0 | 0 | 1 | 1 |
| 10 | ಶ್ರೀ ನಾರಾಯಣ ಗುರು ವಸತಿ ಶಾಲೆ (ಸಹ ಶಿಕ್ಷಣ) | 0 | 0 | 4 | 4 |
| 11 | ಶ್ರೀಮತಿ ರಮಾಬಾಯಿ ಅಂಬೇಡ್ಕರ್ ವಸತಿ ಶಾಲೆಗಳು (ಸಹ ಶಿಕ್ಷಣ) | 1 | 0 | 0 | 1 |
| 12 | ಶ್ರೀಮತಿ ಸಾವಿತ್ರಿ ಬಾ ಫುಲೆ ವಸತಿ ಶಾಲೆಗಳು (ಸಹ ಶಿಕ್ಷಣ) | 1 | 0 | 0 | 1 |
| 13 | ಮೊರಾರ್ಜಿ ದೇಸಾಯಿ ಬಾಲಕರ ವಸತಿ ಶಾಲೆಗಳು | 1 | 0 | 7 | 8 |
| 14 | ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಶಾಲೆಗಳು | 1 | 0 | 3 | 4 |
| 15 | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು (ಸಹ ಶಿಕ್ಷಣ) | 174 | 43 | 132 | 349 |
| 16 | ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಗಳು | 4 | 0 | 0 | 4 |
| 17 | ಮೇಲ್ದರ್ಜೆಗೆರಿಸಿದ ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಗಳು | 1 | 0 | 0 | 1 |
| 18 | ಮೇಲ್ದರ್ಜೆಗೆರಿಸಿದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು (ಸಹ ಶಿಕ್ಷಣ) | 28 | 2 | 0 | 30 |
| 19 | ಸಂತಸೇವಾಲಾಲ್ ವಸತಿ ಶಾಲೆ | 1 | 0 | 0 | 1 |
| | Grand Total | 539 | 156 | 179 | 874 |

ಸಂಘದ ಅಧೀನದಲ್ಲಿ ವಸತಿ ಶಾಲೆ/ಕಾಲೇಜುಗಳಲ್ಲಿ 2025-26ನೇ ಸಾಲಿನ ವಿದ್ಯಾರ್ಥಿಗಳ ಮಂಜೂರಾತಿ ಮತ್ತು ದಾಖಲಾತಿ ವಿವರ.

| ತರಗತಿ | ಮಂಜೂರಾತಿ ಸಂಖ್ಯೆ | | | ದಾಖಲಾತಿ ಸಂಖ್ಯೆ | | |
|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 6 ನೇ ತರಗತಿ | 16490 | 26580 | 43070 | 15459 | 22912 | 38371 |
| 7 ನೇ ತರಗತಿ | 15180 | 25260 | 40440 | 16070 | 22936 | 39006 |
| 8 ನೇ ತರಗತಿ | 15180 | 25260 | 40440 | 15972 | 23135 | 39107 |
| 9 ನೇ ತರಗತಿ | 15060 | 25010 | 40070 | 15040 | 22127 | 37167 |
| 10ನೇ ತರಗತಿ | 14960 | 24910 | 39870 | 15132 | 20446 | 35578 |
| **A** | **76870** | **127020** | **203890** | **77673** | **111556** | **189229** |
| ಪ್ರಥಮ ಪಿ.ಯು.ಸಿ | 3800 | 4520 | 8320 | 2234 | 3626 | 5860 |
| ದ್ವಿತೀಯ ಪಿ.ಯು.ಸಿ | 2840 | 2920 | 5760 | 2049 | 3075 | 5124 |
| **B** | 6640 | 7440 | 14080 | 4283 | 6701 | 10984 |
| **ಒಟ್ಟು** | **83510** | **134460** | **217970** | **81956** | **118257** | **200213** |